ಮೊದಲೇ ಎಲ್ಲವನ್ನು ಕಳಕೊಂಡ ಆತನ ಕುಟುಂಬ ತೀರ ಕೆಳಹಂತಕ್ಕೆ ಬಂದು ತಲುಪಿತ್ತು. ಅವನ ತಂದೆ ಸತ್ತಾಗ ಕಣ್ಣುಕುಕ್ಕಿಸುವ ಒಂದು ಶವ ಸಂಸ್ಕಾರ ಜರುಗಿತ್ತು. ನಂತರ ಎಲ್ಲವೂ ದಿವಾಳಿಯಾಗಿ ಹೋಗಿತ್ತು. ಸಾಲ ತೀರಿಸಲು ಇದ್ದ ಆಸ್ತಿಯನ್ನೆಲ್ಲ ಮಾರಲಾಯಿತು. ಉಳಿದ ಒಂದಿಷ್ಟು ಹಣ ಗತಕಾಲದ ವಂಶಪರಂಪರಾಗತ ವೈಭವ ಕಾಯ್ದುಕೊಳ್ಳಲು ಸಾಕಾಗುತ್ತಿರಲಿಲ್ಲ.

ಕೈಲಾಸ ಬಾಬು ನಯಾಂಜೋರ ತೊರೆದು ಕಲ್ಕತ್ತೆಗೆ ಬಂದನು. ಕಮರಿ ಹೋದ ಆ ವೈಭವ ಲೋಕದಲ್ಲಿ ಆತನ ಮಗ ಬಹಳ ದಿನಗಳ ಕಾಲ ಜೀವಿಸಲಿಲ್ಲ. ತನ್ನ ಒಬ್ಬಳೇ ಒಬ್ಬಳು ಮಗಳು ಕುಸುಮಳನ್ನು ತಂದೆಯ ಪಾಲಿಗೆ ಬಿಟ್ಟು ತಾನು ಅಸುನೀಗಿದ.

ಕಲ್ಕತ್ತಾದಲ್ಲಿ ನಾವು ಕೈಲಾಸ ಬಾಬು ಅವರ ನೆರೆಹೊರೆಯವರಾಗಿದ್ದೆವು. ಕುತೂಹಲವೆಂದರೆ ನಮ್ಮ ಮನೆಯ ಇತಿಹಾಸ ಆತನ ಗತಕಾಲದ ಪರಂಪರೆಗೆ ತದ್ವಿರುದ್ಧವಾಗಿತ್ತು. ನನ್ನ ತಂದೆ ಬಹಳ ಪರಿಶ್ರಮ ಪಟ್ಟು ಹಣಗಳಿಸಿದವರು ಹಾಗೂ ಅಗತ್ಯಕ್ಕಿಂತ ಒಂದು ಪೈಸೆ ಕೂಡ ಹೆಚ್ಚಿಗೆ ಖರ್ಚು ಮಾಡದ ಹೆಮ್ಮೆ ಅವನದಾಗಿತ್ತು. ಓರ್ವ ಸಾಮಾನ್ಯ ಕಾರ್ಮಿಕನಂತೆ ಅವನ ಉಡುಪುಗಳಿದ್ದವು ಹಾಗೂ ಆತನ ಕೈಗಳು ಕಾರ್ಮಿಕರ ಹಾಗೇ ಇದ್ದವು. ದುಂದು ವೆಚ್ಚ ಪ್ರದರ್ಶಿಸಿ 'ಬಾಬು' ಎಂಬ ಪ್ರತಿಷ್ಠೆ ಗಳಿಸಿಕೊಳ್ಳಬೇಕೆಂಬ ಹಂಬಲವೂ ಅವನಿಗಿರಲಿಲ್ಲ. ಅವನ ಒಬ್ಬನೇ ಒಬ್ಬ ಮಗನಾದ ನಾನು ಅವನ ಈ ಸರಳ ಜೀವನಕ್ಕಾಗಿ ಉಪಕೃತನಾಗಿದ್ದೆ. ಅವನು ನನಗೆ ಅತ್ಯುತ್ತಮ ಶಿಕ್ಷಣ ಕೊಡಿಸಿದ. ಆದರಿಂದ ಬದುಕಿಗೆ ಒಂದು ಮಾರ್ಗ ಕಂಡುಕೊಳ್ಳಲು ನನ್ನಷ್ಟಕ್ಕೆ ನಾನೇ ಸಮರ್ಥನಾದೆ. ಸ್ವಯಂ ಪ್ರಯತ್ನದಿಂದ ಬೆಳೆದವನೆಂದು ಹೇಳಿಕೊಳ್ಳಲು ನನಗೆ ಸಂಕೋಚವಾಗುವುದಿಲ್ಲ. ದಿವಾಳಿ ಎದ್ದ ಕುಟುಂಬವೊಂದರ ಗತಕಾಲದ ದೀರ್ಘ ವಂಶಾವಳಿಯ ಒಣ ಪ್ರತಿಷ್ಠೆಗಿಂತ, ನನ್ನ ಕಪಾಟಿನಲ್ಲಿರುವ ಗರಿಗರಿಯಾದ ನೋಟುಗಳೇ ನನಗೆ ಹೆಚ್ಚು ಪ್ರಿಯವಾಗಿವೆ.

ಆತನ ಗತಕಾಲದ 'ಬಾಬು' ಖ್ಯಾತಿಯ ದಿವಾಳಿ ಎದ್ದ ಬ್ಯಾಂಕುಗಳಲ್ಲಿ, ಸಾರ್ವಜನಿಕರು ಇರಿಸಿದ ಹಣದ ಮೇಲೆ, ಕೈಲಾಸ ಬಾಬು ದೊಡ್ಡ ಮೊತ್ತದ ಚೆಕ್‌ಗಳನ್ನು ಬರೆಯುವುದು ಕಂಡರೆ, ನನಗೆ ಎಳ್ಳಷ್ಟೂ ಆಗಿ ಬರುತ್ತಿರಲಿಲ್ಲ. ಏಕೆಂದರೆ ನನ್ನ ತಂದೆ ಸ್ವಯಂ ಪರಿಶ್ರಮದಿಂದ ಹಣ ಗಳಿಸಿದ್ದ. ಅದೇ ಕಾರಣಕ್ಕೆ ಕೈಲಾಸ ಬಾಬು ನನ್ನನ್ನು ಕೀಳಾಗಿ ಕಾಣುತ್ತಾನೆಂಬ ಭಾವನೆಯೂ ನನ್ನದಾಗಿತ್ತು.

ನನ್ನನ್ನು ಹೊರತುಪಡಿಸಿ ಯಾರೊಬ್ಬರೂ ಕೈಲಾಸ ಬಾಬುವಿನತ್ತ ಬೇಸರದ ನೋಟ ಬೀರುತ್ತಿರಲಿಲ್ಲ. ನಿಜಕ್ಕೂ, ಅವನಿಗಿಂತ ಕಡಿಮೆ ಕಾಟಕೊಡುವ ವೃದ್ಧರು ಸಿಗುವುದೇ ವಿರಳ. ದುಃಖದ ಸಂದರ್ಭವೇ ಇರಲಿ, ಸಂತಸದ ಸಂದರ್ಭವೇ ಇರಲಿ, ತನ್ನ ದಯಾಪರ ಸೌಜನ್ಯದ ನಡೆನುಡಿಗಳೊಂದಿಗೆ ಆತ ಪ್ರತ್ಯಕ್ಷನಾಗುತ್ತಿದ್ದ. ನೆರೆಹೊರೆಯವರ ಎಲ್ಲ ಸಮಾರಂಭಗಳಲ್ಲಿ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದ. ಆತನ ಚಿರಪರಿಚಿತ ನಸುನಗೆ ಹಿರಿಕಿರಿಯರೆಲ್ಲರನ್ನೂ ಸ್ವಾಗತಿಸುತ್ತಿತ್ತು. ಪ್ರತಿಯೊಬ್ಬರ ಪ್ರಾಪಂಚಿಕ ಸುಖದುಃಖಗಳ ಕುರಿತು ವಿಚಾರಿಸುವಾಗ ಆತನಿಗೆ ದಣಿವು ಎಂಬುದೇ ಇರಲಿಲ್ಲ. ಯಾರಾದರೂ ಗೆಳೆಯರು ದಾರಿಯಲ್ಲಿ ಭೇಟಿಯಾದರೆ ಸಾಕು, ಅವರನ್ನು ತಡೆದು ನಿಲ್ಲಿಸಿದ ಮೇಲೆ, ಆತನ ತುಟಿಗಳಿಂದ ಈ ಕೆಳಗಿನಂತೆ ಪ್ರಶ್ನೆಗಳ ಸರಮಾಲೆಯೇ ಹೊರಹೊಮ್ಮುತ್ತಿತ್ತು.

"ಗೆಳೆಯನೆ, ನಿನ್ನನ್ನು ಕಂಡು ತುಂಬ ಸಂತಸವಾಯಿತು. ಎಲ್ಲರೂ ಕ್ಷೇಮವೆ? ಶಶಿ ಹೇಗಿದ್ದಾನೆ? ಮತ್ತೆ ದಾದಾ– ಅವರು ಚೆನ್ನಾಗಿದ್ದಾರೆಯೆ? ಮಾಧುವಿನ ಮಗನಿಗೆ ಜ್ವರವೆಂದು ನನಗೆ ಇದೀಗ ಗೊತ್ತಾಯಿತು. ಅವನು ಹೇಗಿದ್ದಾನೆ? ಆ ಬಗ್ಗೆ ಕೇಳಿದ್ದಿಯಾ? ಅಂದಹಾಗೆ, ಹರಿಚರಣ ಬಾಬು – ಬಹಳ ದಿನಗಳಿಂದ ಅವರನ್ನು ಕಾಣಲೇ ಇಲ್ಲ, ಅವರಿಗೆ ಕಾಯಿಲೆ ಇಲ್ಲವಷ್ಟೆ? ರಖ್ವಾಲನ ವಿಷಯ ಏನಾಯಿತು? ಮತ್ತೆ... ಮತ್ತೆ... ನಿನ್ನ ಕುಟುಂಬದ ಹೆಣ್ಣುಮಕ್ಕಳು ಹೇಗಿದ್ದಾರೆ?"